ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 15 (01)

ಶ್ರೀ ಪಾಟೀಲ್ ಬಿಸಿ (ಹಿರೇಕೆರೂರು)

ಅ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಲ್ಲಿ ಸರ್ಕಾರಿ ಪ್ರೌಢಶಾಲೆಗಳಿಗೆ ನೀಡಿದ ಹಣವನ್ನು ಗುತ್ತಿಗೆ ಆಧಾರದಲ್ಲಿ ಪ್ಯಾಕೇಜ್ ನೀಡಿದ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಆ) ಬಂದಿದೆ.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾಗಿರುವ ಸಿವಿಲ್ ಕಾಮಗಾರಿಗಳ ನಿರ್ಮಾಣಕ್ಕಾಗಿ ಪ್ಯಾಕೇಜ್ ಮಾದರಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿರುತ್ತದೆ ಹಾಗೂ ಸದರಿ ಟೆಂಡರ್‌ನ ಅನುಮೋದನೆಗೆ ಸರಕಾರ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ಶ್ರೀ ಬಿ.ಸಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಲ್ಲಿ ಕೇಂದ್ರ ಸರ್ಕಾರದಿಂದ ಹೈಸ್ಕೂಲ್‌ಗಳಿಗೆ, ಶಾಲಾ ರೂಮ್‌ಗಳಿಗೆ, ಗ್ರಂಥಾಲಯಕ್ಕೆ, ಶೌಚಾಲಯಕ್ಕೆ ಹಣವನ್ನು ಕೊಟ್ಟಿದ್ದಾರೆ. ಇವತ್ತು ಸರ್ಕಾರದಿಂದ ಏನು ಮಾಡಿದ್ದಾರೆಂದರೆ ಎಲ್ಲಾ ಹಣವನ್ನು ಇ-ಟೆಂಡರ್ ಮೂಲಕ ಕರೆದು, ರಾಜ್ಯಮಟ್ಟದಲ್ಲಿ ಟೆಂಡರ್ ಕರೆದಿದ್ದಾರೋ ವಲಯ ಮಟ್ಟದಲ್ಲಿ ಕರೆದಿದ್ದಾರೋ ಗೊತ್ತಿಲ್ಲ. ಈ ರೀತಿ ಪ್ಯಾಕೇಜ್ ಮೂಲಕ ಟೆಂಡರ್ ಕರೆಯುವುದರಿಂದ ಏನಾಗುತ್ತದೆಂದರೆ, ಗ್ರಾಮೀಣ

ಪ್ರದೇಶದಲ್ಲಿರತಕ್ಕಂಥ ನಿರುದ್ಯೋಗಿ ಯುವಕರು ಒಂದೊಂದು ರೂಂಗಳನ್ನು ಕಟ್ಟಿಕೊಂಡು ಬದುಕಬಹುದಾಗಿತ್ತು. ಆದರೆ ಸಣ್ಣ ಪುಟ್ಟ ಕಂಟ್ರಾಕ್ಟರ್‌ಗಳನ್ನು ಬದುಕುವುದಕ್ಕೆ ಬಿಟ್ಟಿಲ್ಲ. ದೊಡ್ಡ ತಿಮಿಂಗಲಗಳು ಬದುಕಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ಈ ಪ್ಯಾಕೇಜ್ ಯೋಜನೆ ಮಾಡಿದೆಯಾ ಎನ್ನುವಂಥ ಒಂದು ಸಂಶಯ ಬರುತ್ತಿದೆ. ಏಕೆಂದರೆ ಎಲ್ಲವೂ ಪ್ಯಾಕೇಜ್ ಮಟ್ಟದಲ್ಲಿಯೇ ನಡೆಯುತ್ತಿವೆ. ಇದು ಶಿಕ್ಷಣ ಇಲಾಖೆಯಲ್ಲಿ ಒಂದು ಕಡೆ ಆದರೆ ಪೌರಾಡಳಿತ ಇಲಾಖೆಯಲ್ಲಿ ಕೂಡ ಜಿಲ್ಲಾಮಟ್ಟದಲ್ಲಿ ಪ್ಯಾಕೇಜ್ ಮೂಲಕ ನಡೆಯುತ್ತಿದೆ. ಇದು ಮಾಡುವುದರಿಂದ ಅಲ್ಲಿರುವ ನಿರುದ್ಯೋಗಿ ಯುವಕರಿಗೆ ತೊಂದರೆ ಆಗಿದೆ ಎನ್ನುವುದು ನನ್ನ ಭಾವನೆ. ಆದ್ದರಿಂದ ಈ ಪ್ಯಾಕೇಜ್ ಯೋಜನೆಯನ್ನು ಕಡಿಮೆ ಮಾಡಿ ಅಲ್ಲಿರುವ SDMC ಗಳಿಗೆ ಕೊಟ್ಟರೆ ಸ್ಥಳೀಯವಾಗಿ ಇರುವ ಸಣ್ಣ ಪುಟ್ಟ ಕಂಟ್ರ್ಯಾಕ್ಟರುಗಳಿಗೆ ಅನುಕೂಲವಾಗುತ್ತದೆಂದು ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಬಿ.ಸಿ. ಪಾಟೀಲ್‌ರವರು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಯೋಜನೆಯಡಿಯಲ್ಲಿಯ ಹಣವನ್ನು SDMC ಯವರಿಗೆ ಕೊಟ್ಟರೆ ಒಳ್ಳೆಯದಾಗುತ್ತದೆ. ಅವರು ಕಟ್ಟಡಗಳನ್ನು ಕಟ್ಟಿಕೊಳ್ಳುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಯೋಜನೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಒಂದು ಮಹತ್ವದ ಯೋಜನೆ. ಅವರು ಕೊಡುವ ಹಣವನ್ನು ನಾವು ಯಾವ ರೀತಿಯಾಗಿ ಬಳಕೆ ಮಾಡಿಕೊಳ್ಳಬೇಕು ಎನ್ನುವುದಕ್ಕೆ ಅದರೇ ಆದ ಒಂದು ಗೈಡ್‌ಲೈನ್ಸ್ ಇದೆ. SSA ಒಳಗೆ SDMC ಗಳಿಗೆ ಹಣವನ್ನು ಕೊಡುವುದು ಆ ನಾರ್ಮ್ಸ್ ಹಾಗೆ ಇದೆ. RMSA ಒಳಗೆ ಈ ರೀತಿ ಖರ್ಚು ಮಾಡುವುದಕ್ಕೆ ನಾರ್ಮ್ಸ್ Central Government Guide Lines ಇದೆ. ಅದರ ಪ್ರಕಾರ ಟೆಂಡರ್ ಕರೆದಿದೆ. ಟೆಂಡರ್‌ನಲ್ಲಿ ಈಗಾಗಲೇ negotiation ಇತ್ಯಾದಿ ನಡೆಯುತ್ತಿದೆ. ಆದರೆ ಇನ್ನು ಫೈನಲ್ ಆಗಿಲ್ಲ. ಈ ಸದನಕ್ಕೆ ಮತ್ತು ರಾಜ್ಯದ

ಜನತೆಗೆ ತಿಳಿಸಬೇಕಾದ ಸಂಗತಿ ಎಂದರೆ ಕೇಂದ್ರ ಸರ್ಕಾರದಲ್ಲಿ ನಮಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ 1350 ಕೋಟಿ ರೂ. ಗಳು ಬೇಕಾಗುತ್ತದೆ. ಇದರಲ್ಲಿ 304 ಹೊಸ ಹೈಸ್ಕೂಲ್ ಕಟ್ಟಡಗಳಿಗೆ ಇದೆ, 1891 ಹಾಲಿ ಇರುವ ಪ್ರೌಢಶಾಲಾ ಕಟ್ಟಡಗಳ ಬಲವರ್ಧನೆಗೆ ಇದೆ. ಆದರ್ಶ ವಿದ್ಯಾಲಯಗಳ ನಿರ್ಮಾಣಕ್ಕೆ 74 ಕಡೆಗಳಲ್ಲಿ ಇದೆ. 62 ಹೆಣ್ಣುಮಕ್ಕಳ ವಸತಿ ನಿಲಯಗಳಿಗೆ ಇದೆ. ಇದಕ್ಕೆ ಕೇಂದ್ರ ಸರ್ಕಾರದಿಂದ 1350 ಕೋಟಿ ರೂ.ಗಳು ಬರಬೇಕಾಗಿದ್ದು ಇದುವರೆಗೆ ನಮಗೆ 160 ಕೋಟಿ ರೂ.ಗಳು ಮಾತ್ರ ಬಂದಿದೆ. ಬಹಳ ದೊಡ್ಡ ಸಮಸ್ಯೆ ಇಡೀ ದೇಶದಲ್ಲಿಯೆ ಆಗಿದೆ. ಎಲ್ಲಾ ರಾಜ್ಯಗಳ ಶಿಕ್ಷಣ ಸಚಿವರ ಸಭೆಯಲ್ಲಿ ನಾನು ಭಾಗವಹಿಸಿದಾಗಲೂ ದೇಶದ ಎಲ್ಲಾ ರಾಜ್ಯಗಳ ಶಿಕ್ಷಣ ಸಚಿವರುಗಳು ಇದರ ಬಗ್ಗೆ ಹೇಳುತ್ತಿದ್ದರು. ಇದಕ್ಕೆ 2008–09 ನೇ ಸಾಲಿನ ಎಸ್.ಆರ್.ರೇಟ್ ಇದೆ. ಈ ರೇಟಿಗೆ ನೀವು ಈ ಕೆಲಸವನ್ನು ಮಾಡಬೇಕೆಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಯಾವ ರಾಜ್ಯ ಸರ್ಕಾರಗಳು ಇದನ್ನು ಮಾಡುವುದಕ್ಕೆ ಆಗುತ್ತಿಲ್ಲ. ನಮ್ಮ ರಾಜ್ಯ ಸರ್ಕಾರದಲ್ಲಿ ನಾವು ಸುಮಾರು 474 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಕ್ಯಾಬಿನೆಟ್‌ನಲ್ಲಿ ಅನುಮತಿಯನ್ನು ತೆಗೆದುಕೊಂಡು ರಾಜ್ಯ ಸರ್ಕಾರವೇ ಆ ಹಣವನ್ನು ಭರಿಸಿಕೊಳ್ಳುವುದಕ್ಕೆ ಮತ್ತು ಅನುಷ್ಠಾನಗೊಳಿಸುವುದಕ್ಕೆ ಮುಂದಾಗಿದ್ದೇವೆ. ಕೇಂದ್ರ ಸರ್ಕಾರ ಇತ್ತೀಚಿನ ದಿವಸಗಳಲ್ಲಿ ನಮ್ಮ RMSA ಯೋಜನೆ ಇರಬಹುದು. ಸರ್ವ ಶಿಕ್ಷಣ ಅಭಿಯಾನ ಯೋಜನೆ ಇರಬಹುದು. ನಿರಿಕ್ಷಿತವಾದ ಹಣವನ್ನು ನಮಗೆ ಅವರು ಬಿಡುಗಡೆ ಮಾಡುತ್ತಿಲ್ಲ. ಉದಾಹರಣಗೆ ಸರ್ವ ಶಿಕ್ಷಣ ಅಭಿಯಾನದಲ್ಲಿ 2064 ಕೋಟಿ ರೂ.ಗಳು ನಮಗೆ ಮಂಜೂರಾಗಿದ್ದರೆ ಅದರಲ್ಲಿ ಕೇವಲ 400 ಕೋಟಿ ರೂ.ಗಳಷ್ಟು ಬಿಡುಗಡೆ ಆಗಿದೆ. ನಮಗೆ ಹಣ ಬಿಡುಗಡೆ ಆಗುತ್ತಿಲ್ಲ. ನಮಗೆ ಕೇಂದ್ರ ಸರ್ಕಾರ ಒಂದು ಆತಂಕ ಸೃಷ್ಟಿಸುವಂತೆ ನಿರ್ಮಾಣವಾಗಿದೆ. ಶಿಕ್ಷಣ ಇಲಾಖೆ ಕುರಿತಂತೆ ನಾನು ಮಾತನಾಡುತ್ತಿದ್ದೇನೆ. ಆ ರೀತಿಯಾಗಿ ಒಂದು ಕಡೆ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲ. RMSA ಹಣ ಕೊಡುತ್ತಿಲ್ಲ, SSA ಗೆ ದುಡ್ಡು ಕೊಡುತ್ತಿಲ್ಲ. ನಾನು ಯಾವುದೇ ರಾಜಕೀಯ ಉದ್ದೇಶವನ್ನು

ಇಟ್ಟುಕೊಂಡು ಈ ಮಾತನ್ನು ಹೇಳುತ್ತಿಲ್ಲ. ಇಡೀ ದೇಶದ ಎಲ್ಲಾ ರಾಜ್ಯ ಶಿಕ್ಷಣ ಸಚಿವರು ಇದರಲ್ಲಿ ಆತಂಕಿತರಾಗಿದ್ದಾರೆ. ಹಾಗಾಗಿ ಇನ್ನೂ ಹೆಚ್ಚಿಗೆ ಹಣ ಬಿಡುಗಡೆ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ನಾವು ಒತ್ತಡವನ್ನು ತರುತ್ತಿದ್ದೇವೆ. ಆದರೆ ಎಸ್.ಆರ್.ರೇಟ್ 2008–09ನೇ ಸಾಲಿನದು ಇದೆ. 2010ರಲ್ಲಿ ನಮಗೆ ಇದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಎಸ್.ಆರ್.ರೇಟ್ 2008–09 ಎಂದು ಹೇಳುತ್ತಿದ್ದಾರೆ. ಈಗ ನಾವು 2013–14ನೇ ಸಾಲಿಗೆ ಪಾದಾರ್ಪಣೆ ಮಾಡುತ್ತಿದ್ದೇವೆ. ಹೆಚ್ಚುವರಿ 474 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಭರಿಸಿಕೊಂಡಿದೆ. ಆದರೂ ಸಹ ರಾಜ್ಯ ಸರ್ಕಾರದಿಂದ ನಮಗೆ ಅನುಷ್ಠಾನಗೊಳಿಸುವುದಕ್ಕೆ ಕಷ್ಟವಾಗುತ್ತಿದೆ. ಇಡೀ ದೇಶದ ಎಲ್ಲಾ ರಾಜ್ಯಗಳ ಸ್ಥಿತಿ ಇದಾಗಿದೆ. ಆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಆಗ್ರಹಿಸುತ್ತೇವೆ. ಇವತ್ತಿನ ಎಸ್.ಆರ್.ರೇಟ್ ಪ್ರಕಾರ ಈ ಉಳಿದ ಹಣವನ್ನು ಬಿಡುಗಡೆ ಮಾಡಬೇಕು. ತಾವು ಬಿಡುಗಡೆ ಪ್ರಕ್ರಿಯೆ ಬಗ್ಗೆ ಕೇಳಿದಿರಿ. SDMC ಗಳಿಗೆ ಕೊಡಿ ಎಂದು ಕೇಳಿದಿರಿ. ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ್: ಮಾನ್ಯ ಅಧ್ಯಕ್ಷರೆ, ಬೇರೆ ರಾಜ್ಯದಲ್ಲಿ ಈ ಹಣವನ್ನು ಬಳಸಿಕೊಂಡಿದ್ದಾರೆನ್ನುವ ಬಗ್ಗೆ ನಮಗೆ ಮಾಹಿತಿ ಇದೆ. ಹೋದ ವರ್ಷವೇ ಆಂಧ್ರ ಪ್ರದೇಶ ಮತ್ತು ಕೇರಳ ರಾಜ್ಯದವರು ಬಳಸಿಕೊಂಡಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರ ಅದರ ಬಗ್ಗೆ ಕಾಳಜಿ ವಹಿಸಿಲ್ಲ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ್: ಇದರ ಬಗ್ಗೆ ರಾಜ್ಯ ಸರ್ಕಾರ ಕಾಳಜಿ ವಹಿಸುತ್ತಿಲ್ಲ. ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುತ್ತಿದ್ದಾರೆ.

ಶ್ರೀ ಬಿ.ಸಿ.ಪಾಟೀಲ್: ಮಾನ್ಯ ಶಿಕ್ಷಣ ಸಚಿವರು ಕೇಂದ್ರ ಸರ್ಕಾರದಿಂದ ಅಷ್ಟು ಹಣ ಬಿಡುಗಡೆಯಾಗಲಿಲ್ಲವೆಂದು ಹೇಳಿದರು. ಇವರು utilization certificate ಕೊಟ್ಟರೋ ಬಿಟ್ಟರೋ ನಮಗೆ ಗೊತ್ತಿಲ್ಲ.ಈಗ ಪ್ಯಾಕೇಜ್ ಮಾಡುವಂತಹ ಉದ್ದೇಶ ಏನು? ಪ್ಯಾಕೇಜ್ ಮಾಡಬೇಕೆಂದು ಯಾವ ಗೈಡ್‌ಲೈನ್ಸ್‌ನಲ್ಲಿ ಹೇಳಲಾಗಿದೆ ಎಂದು enlighten ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಪ್ಯಾಕೇಜ್ ಮಾಡುವುದರಿಂದ ಕೆಲಸಗಳು ಬೇಗ ಆಗುವುದಿಲ್ಲ. ಯಾವ ಪ್ಯಾಕೇಜ್‌ನಲ್ಲಿ ದೊಡ್ಡ contractor ತೆಗೆದುಕೊಂಡಿರುತ್ತಾರೆ ಅವರು ಯಾರೂ ಸ್ಥಳೀಯವಾಗಿ ಒಂದು ಕೆಲಸ ಮಾಡುವುದಿಲ್ಲ. ಕೆಲಸ ಮಾಡಬೇಕಾದರೆ ಮತ್ತೆ ಅಲ್ಲೇ local ನವರಿಗೆ, sub contract ಕೊಟ್ಟು ಕೆಲಸ ಮಾಡುತ್ತಾರೆ. ಇದರಲ್ಲಿ ಹಣ ಜಾಸ್ತಿ ವ್ಯಯವಾಗುತ್ತದೆ. ಇದು District level package ಯೇ ಅಥವಾ ಯಾವ ಪ್ಯಾಕೇಜ್? ಇವರು state level package ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಈಗ ನಮ್ಮ ಸರ್ಕಾರಕ್ಕೆ ಎಲ್ಲವನ್ನೂ ಪ್ಯಾಕೇಜ್ ಮಾಡಬೇಕೆಂದು ಎಂದು ಇದ್ದಿದ್ದರೆ, ಸರ್ವಶಿಕ್ಷಣ ಅಭಿಯಾನದಲ್ಲಿ ನೂರಾರು ಕೋಟಿ, ಸಾವಿರಾರು ಕೋಟಿ ರೂ.ಗಳ ಪ್ಯಾಕೇಜ್‌ನಲ್ಲಿ ಏನು ಹಣ ಬರುತ್ತದೆಯಲ್ಲಾ ಅದನ್ನೂ ನಾವು ಪ್ಯಾಕೇಜ್ ಮಾಡುತ್ತಿದ್ದೆವು. ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ಎಸ್.ಡಿ.ಎಂ.ಸಿಗಳಿಗೆ ಕೊಡಬೇಕಾಗುತ್ತದೆ. ಎಸ್.ಡಿ.ಎಂ.ಸಿಗಳಿಗೇ ಕೊಡುತ್ತಿದ್ದೇವೆ. ಹಾಗಾಗಿ ಇದಕ್ಕೂ ಸಹ norms ಇದೆ. ಇಷ್ಟು ದೊಡ್ಡ ಹಣವನ್ನು ಕೊಡುವುದು ಇದ್ದರೆ, ನಾವು ಮಾಡಿರುವ ಪ್ಯಾಕೇಜ್ process ನಲ್ಲಿ ಏನಾದರೂ problems ಆಗಿದ್ದರೆ ಹೇಳಲಿ. ಇದರೊಳಗೆ ನಾವು e-tender ಕರೆದಿದ್ದೇವೆ. ಉಳಿದ ಎಲ್ಲಾ procedure ಅನ್ನು follow ಮಾಡಿದ್ದೇವೆ. ಈ process ನಲ್ಲಿ ಎಲ್ಲಾದರೂ problem ಆದರೆ ಹೇಳಿ. ಆದರೆ norms ಪ್ರಕಾರ ಈ ರೀತಿಯೇ ಮಾಡಬೇಕಾದಂತಹ ಅಗತ್ಯತೆ ಇದೆ.

ಅಧ್ಯಕ್ಷರು: ಶ್ರೀ ಅಪ್ಪಾಜಿ.ಸಿ.ಎಸ್.ನಾಡಗೌಡರು ಪ್ರಶ್ನೆ ಕೇಳುವುದು.